

ಗೋಣು ಆಡಿಸಿದ. ಹಾಡಿದಳು, 'ಪೂಜ್ಯಾಯ ಧನಂಜಯಾಯ ಸಂಗೀತ ರತಾಯಚ! ಭಜತಾಂ ವೈಣಿಕವಿದ್ವಾನ್ ನಮತಾಂ ಕಾಮಧೇನುವೆ||' ಧನಂಜಯ ಯಾರು? ತನ್ನ ಹೆಸರಲ್ಲವೆ ಎಂದು ನೆನಪಾದಾಗ ಹುಡುಗ ಕಣ್ಣೀರಾದ. 'ನಾನೀ ಸ್ತೋತ್ರಕ್ಕೆ ಅರ್ಹನೆ?' ತಡವರಸಿದ. 'ಖಂಡಿತ, ನೀವು ವೀಣೆ ಹಿಡಿದ ಫೋಟೊನಾ ದೇವರ ಕೋಣೆಯಲ್ಲಿಡುವೆ. ತೆಗೆಸಿಕೊಡಿ ಪ್ಲೀಸ್' ಅಂದಳು ಭಾವುಕಳಾಗಿ. 'ದೇವರಕೋಣೆಯ ಅಗತ್ಯವಿಲ್ಲ ನಿನ್ನ ಹೃದಯದಲ್ಲಿಟ್ಟರೆ ಸಾಕು' ಎಂದವನ ನಾಲಿಗೆ ತುದಿಗೇ ಬಂದ ಮಾತಿಗೆ ಈಚೆ ಬರುವ ಧೈರ್ಯವೇ ಇರಲಿಲ್ಲ. ನಾಲಿಗೆ ತಿರುಗಿಸಿಕೊಳ್ಳುವುದರಲ್ಲಿ, 'ಬರ್ತೀನಿ ಸರ್' ಎಂದ ಹುಡುಗಿ ಇವನ ಪೆದ್ದು ಮೋರೆ ನೋಡಿ ನಗುತ್ತಾ ಮಾಯವಾದಳು.

ಮರುದಿನವೇ ಗೆಳೆಯನ ಭವಾನಿ ಸ್ಟುಡಿಯೊಕ್ಕೆ ಓಡಿದ. ವೀಣೆ ಹಿಡಿದ ಫೋಟೊ ಹಿಡಿಸಿ ತಂದವಳಿಗೆ ಅರ್ಪಿಸಿದ. 'ಇದೇನ್ರಿ ಇದು? ಭಾಗವತರ ಥರಾ ಕ್ರಾಪು! ನಾಟ್ ಗುಡ್ ಲುಕಿಂಗ್' ಎಂದು ಹೊಸರಾಗ ಹಾಡಿದಳು. ಹುಡುಗ ಸೆಲೂನ್‌ಗೆ ನುಗ್ಗಿದ. ತಲೆ ಸುತ್ತಲೂ ಮಿಷನ್ ಹೊಡೆಸಿ ಬುರುಡೆ ಮೇಲಷ್ಟೆ ಕೂದಲು ಬಿಟ್ಟು ಬಂದು ಇದು ಸ್ಪೈಕ್ಸ್ ಕಟಿಂಗ್ ಅಂದ. ಪ್ಯಾಂಟ್ ಮೇಲೆ ಸ್ಟ್ರೈಪ್ಸ್ ಇರುವ ಟೀಶರ್ಟ್ ಹಾಕಿ ಶೂ ತೊಟ್ಟು ಬಂದು ಅವಳನ್ನು ಅಟ್ರಾಕ್ಟ್ ಮಾಡಲು ಹವಣಿಸಿದ. 'ಇದೇನೋ ನಿನ್ನ ಅವತಾರ ಮುಂಡೇದೆ. ಹಿಂಗಾದ್ರೆ ಮರ್ಯಾದಸ್ಥರ ಮನೆ ಸಾಂಪ್ರದಾಯಿಕ ಹುಡ್ಗೀರು ಟ್ಯೂಶನ್‌ಗೆ ಬಂದಾರೇನೋ? ನಾವೇನು? ನಮ್ಮ ಸಂಗೀತ ಪರಂಪರೆ ಎಂತಹದ್ದು?' ಅಜ್ಜ ಕೂಗಾಡಿತು. 'ಸುಮ್ನಿರಜ್ಜ. ಈಗ ತ್ಯಾಗರಾಜರು, ಪುರಂದರದಾಸರು ಇದ್ದಿದ್ದರೆ ಅವರೂ ಹಿಂಗೆ ಡ್ರೆಸ್ಸು ಮಾಡ್ತಿದ್ದರು.' ಅಂತ ತಾನೂ ಕೂಗಾಡಿದ. ದಿನಗಳು ಕಲರ್‌ಫುಲ್ ಆದವು.